ಇ) ಯೋಜನೆಗೆ ಅನುಮೋದನೆ ದೊರತಿಲ್ಲವಾದ್ದರಿಂದ ಇದನ್ನು ಪೂರ್ಣಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕಾಮಗಾರಿಗಳ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 661 (1391)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸದ್ಯ ಚಾಲ್ತಿಯಲ್ಲಿ ಇರುವ ಸಣ್ಣ ನೀರಾವರಿ ಕೆಲಸಗಳು ಯಾವುವು, (ಗ್ರಾಮವಾರು ವಿವರ ನೀಡುವುದು)

ಆ) 1996-97ರಲ್ಲಿ ಮಂಜೂರಾದ ಹೊಸ ಕಾಮಗಾರಿಗಳು ಯಾವುವು (ವಿವರ ಒದಗಿಸುವುದು).

ಶ್ರೀ ತಿಪ್ಪೆಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸದ್ಯ ಸಣ್ಣ ನೀರಾವರಿ ಉತ್ತರ ವಲಯದ ವ್ಯಾಪ್ತಿಯಲ್ಲಿ ಯಾವುದೇ ಸಣ್ಣ ನೀರಾವರಿ ಕೆಲಸಗಳು ಚಾಲ್ತಿಯಲ್ಲಿಲ್ಲ. ಜಿಲ್ಲಾ ಪಂಚಾಯತ್ ಧಾರವಾಡ ವ್ಯಾಪ್ತಿಯಲ್ಲಿ 4703 ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಇನಾಂಮೀರಾ ಗ್ರಾಮದಲ್ಲಿ ಒಂದು ಸಾಮೂಹಿಕ ನೀರಾವರಿ ಯೋಜನೆ ಚಾಲ್ತಿಯಲ್ಲಿದೆ.

ಆ) 1996-97ನೇ ಸಾಲಿನಲ್ಲಿ ಜುಲೈ ತಿಂಗಳವರೆಗೆ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸಣ್ಣ ನೀರವಾರಿ ಉತ್ತರ ವಲಯದ ನಿಯಂತ್ರಣದಡಿ ಯಾವುದೇ ಕಾಮಗಾರಿಗಳು ಮಂಜೂರು ಆಗಿರುವುದಿಲ್ಲ. ಧಾರವಾಡ ಜಿಲ್ಲಾ ಪಂಚಾಯತ್ ನಿಯಂತ್ರಣದಡಿಯಲ್ಲಿ 1996-97ನೇ ಸಾಲಿನ ಕ್ರಿಯಾ ಯೋಜನೆ ಇನ್ನೂ ಅನುಮೋದನೆ ಆಗಿರುವುದಿಲ್ಲ.

ವಿಷಯ:- ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜೋಳವನ್ನು ಪಡಿತರ ವಿತರಣೆಯಲ್ಲಿ ಹಂಚಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 688 (1499)

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜೋಳ ಜನರ ದೈನಂದಿನ ಮುಖ್ಯ ಆಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಜೋಳವನ್ನು ಪಡಿತರ ವಿತರಣೆಯಲ್ಲಿ ತರಲು ಸರ್ಕಾರಕ್ಕಿರುವ ತೊಂದರೆಗಳೇನು?